ಸದನದಲ್ಲಿ ಇಂಥ ಅನೇಕ ಗಂಭೀರವಾದ ವಿಚಾರಗಳು ಬಂದಾಗ ಅವುಗಳನ್ನು ಚರ್ಚೆಗೆ ತೆಗೆದುಕೊಳ್ಳಬೇಕೆಂದು ಹೇಳಿದಾಗ ರೂಲ್ಸ್‌ನ್ನು ಸಸ್ಪೆಂಡ್ ಮಾಡಿ ತೆಗೆದುಕೊಂಡಿರತಕ್ಕಂತಂಥ ಅನೇಕ ಉದಾಹರಣೆಗಳಿವೆ. ಇದನ್ನು ಆ ದೃಷ್ಟಿಯಲ್ಲಿಟ್ಟುಕೊಂಡು ಈ ನಿಲುವಳಿ ಸೂಚನೆಯನ್ನು ತೆಗೆದುಕೊಳ್ಳಬೇಕೆಂದು ತಮ್ಮಲ್ಲಿ ಕಳಕಳಿಯಿಂದ ವಿನಂತಿ ಮಾಡಿಕೊಳ್ಳುತ್ತೇನೆ. ಬಿಸಿನೆಸ್ ಟ್ರಾನ್ಸ್‌ಾಕ್ಷನ್ ರೂಲ್ಸ್ ಪ್ರಕಾರ ತಮಗೆ ಅಧಿಕಾರ ಇದೆ; ತಾವು ಚರ್ಚೆಗೆ ಅವಕಾಶ ಮಾಡಿಕೊಡಿ, ಅವರೂ ಕೂಡ ಒಪ್ಪುತ್ತಾರೆ.

ಅಧ್ಯಕ್ಷರು:- ನಾನು ಸಾಕಷ್ಟು ಸಾರಿ ತಮ್ಮಲ್ಲಿ ಮನವಿ ಮಾಡಿಕೊಂಡಿದ್ದೇನೆ. ಉಪ ಪ್ರಶ್ನೆಯನ್ನು ಕೇಳುವ ಹಕ್ಕು ಮಾನ್ಯ ಸದಸ್ಯರಿಗೆ ಇತ್ತು. ದಯವಿಟ್ಟು ತಾವು ಕುಳಿತುಕೊಳ್ಳಿ. Let me complete the Question Hour.

ಶ್ರೀ ಎಂ.ಮಲ್ಲಿಕಾರ್ಜುನ ಖರ್ಗೆ:- ಈ ರೀತಿ ತಾವು ಮಾಡುವುದಾದರೆ ನಮಗೆ ಬೇರೆ ದಾರಿ ಇಲ್ಲದೆ ಇಲ್ಲಿ ಧರಣಿ ಕೂರಬೇಕಾಗುತ್ತದೆ. ಇಲ್ಲೇ ಕುಳಿತುಕೊಳ್ಳುತ್ತೇವೆ. ನಮ್ಮದು ಬೇರೆ ಪ್ರಶ್ನೆಯೇ ಇಲ್ಲ.

(ಈ ಹಂತದಲ್ಲಿ ಮಾನ್ಯ ಎಂ.ಮಲ್ಲಿಕಾರ್ಜುನ ಖರ್ಗೆ, ಟಿ.ಬಿ.ಜಯಚಂದ್ರ, ಸಗೀರ್ ಅಹಮದ್, ಮಂಜುನಾಥ.ಸಿ.ಕುನ್ನೂರು ಜಾಸ್.ಶಿವನಂಜಪ್ಪ, ಎ.ಟಿ.ರಾಮಸ್ವಾಮಿ, ಇನ್ನೂ ಹಲವರು ಮಾನ್ಯ ಸಭಾಧ್ಯಕ್ಷರ ಪೀಠದ ಮುಂದಿರುವ ಆವರಣದಲ್ಲಿ ಬಂದು ಧರಣಿ ಕುಳಿತರು.)

ಅಧ್ಯಕ್ಷರು:- ಈಗ ಪ್ರಶ್ನೋತ್ತರ.

(ಚುಕ್ಕೆ ಗುರ್ತಿನ ಪ್ರಶ್ನೆಗಳಿಗೆ ಬಾಯಿ ಮಾತಿನ ಮೂಲಕ ನೀಡಲಾದ ಉತ್ತರಗಳು)

ವಿಷಯ: ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಸಾರಿಗೆ ವ್ಯವಸ್ಥೆ ಅಭಿವೃದ್ಧಿ

1. ಚುಕ್ಕೆ ಗುರುತಿನ ಪ್ರಶ್ನೆ ಸಂಖ್ಯೆ 1(81)

ಶ್ರೀ ಯು.ಆರ್.ಸಭಾಪತಿ (ಉಡುಪಿ)

ಮಾನ್ಯ ಸಾರಿಗೆ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ...

ಅ) ದಕ್ಷಿಣ ಕನ್ನಡ ಜಿಲ್ಲೆಯಲ್ಲಿ 1994-95, 1995-96 ಮೇ, 1996 ಅಂತ್ಯದವರೆಗೆ ಸಂಗ್ರಹವಾದ ರಸ್ತೆ ತೆರಿಗೆ ಎಷ್ಟು?

ಆ) ಸಂಗ್ರಹಿಸಿದ ತೆರಿಗೆಯಿಂದ ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಸಾರಿಗೆ ವ್ಯವಸ್ಥೆ ಅಭಿವೃದ್ಧಿಗೆ ತೆಗೆದುಕೊಂಡ ಕ್ರಮಗಳೇನು?

ಶ್ರೀ ಪಿ.ಜಿ.ಆರ್.ಸಿಂಧ್ಯ (ಸಾರಿಗೆ ಸಚಿವರು):-

1994-95 ರೂ.2416.81 ಲಕ್ಷಗಳು
1995-96 ರೂ.4296.95 ''
1996 ಏಪ್ರಿಲ್ ರೂ.304.88 ''
1996 ಮೇ ರೂ.266.67 ''
ಒಟ್ಟು ರೂ.7284.31 ಲಕ್ಷಗಳು

ಶ್ರೀ ಯು.ಆರ್.ಸಭಾಪತಿ:- ಮಾನ್ಯ ಅಧ್ಯಕ್ಷರೆ, ಮಾನ್ಯ ಸಾರಿಗೆ ಸಚಿವರು, ದಕ್ಷಿಣ ಕನ್ನಡ ಜಿಲ್ಲೆಯಲ್ಲಿ 1994-95, 95-96ರ ಸಾಲಿನಲ್ಲಿ ಒಟ್ಟು 72.84 ಕೋಟಿ ತೆರಿಗೆ ವಸೂಲಾಗಿದೆ ಎಂದು ಹೇಳಿದ್ದಾರೆ. ಈ ಬಗ್ಗೆ ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಯಾವ ಯಾವ ಅಭಿವೃದ್ಧಿ ಕಾರ್ಯಗಳಿಗೆ ಕ್ರಮ ಕೈಗೊಳ್ಳಲಾಗಿದೆ ಎಂಬ ಬಗ್ಗೆ ನಾನು ವಿವರಗಳನ್ನು ಕೇಳಿದ್ದೆ. ಆದರೆ ಇದರ ಬದಲಿಗೆ ಸಂಗ್ರಹಿಸಿದ ತೆರಿಗೆಯಿಂದ ಸಾರಿಗೆ ವ್ಯವಸ್ಥೆಯ ಅಭಿವೃದ್ಧಿಯೂ ಸೇರಿದಂತೆ ರಾಜ್ಯದ ಅಭಿವೃದ್ಧಿಗೋಸ್ಕರ ಉಪಯೋಗಿಸಲಾಗುತ್ತಿದೆ ಎಂಬ ಉತ್ತರ ಬಂದಿದೆ. ಆದರೆ ನನ್ನ ಪ್ರಶ್ನೆಗೆ ಏನು ಉತ್ತರವನ್ನು ಬಯಸಿದ್ದು ಎಂದರೆ, ಇವತ್ತು ದ.ಕ.ಜಿಲ್ಲೆ ಅತಿ ಪ್ರಾಮುಖ್ಯವಾದ ವಾಣಿಜ್ಯ ಕೇಂದ್ರವಾಗಿ ಬೆಳೆದುಬಂದಿದೆ. ಅಷ್ಟೇ ಅಲ್ಲ, ಧಾರ್ಮಿಕ ಸ್ಥಳಗಳಾಗಿ ಕೊಲ್ಲೂರು, ಧರ್ಮಸ್ಥಳ, ಉಡುಪಿ, ಇವೆಲ್ಲಾ ಸೇರಿವೆ. ಇವತ್ತು 72.84 ಕೋಟಿ ರೂ. ತೆರಿಗೆ ನೀಡಿದಂಥ ಈ ದ.ಕ.ಜಿಲ್ಲೆಗೆ ಕನಿಷ್ಠ 5 ಕೋಟಿ ರೂ.ಗಳನ್ನಾದರು ವಿನಿಯೋಗಿಸಿದ್ದಿದ್ದರೆ ಇನ್ನಷ್ಟು ಸುವ್ಯವಸ್ಥಿತ ಸಾರಿಗೆ ವ್ಯವಸ್ಥೆಯನ್ನು ಮಾಡಬಹುದಿತ್ತು ಎಂಬುದು ನನ್ನ ಆಸೆ. ಇದರ ಜೊತೆಗೆ....

ಅಧ್ಯಕ್ಷರು:- ಸದಸ್ಯರಾದ ಮಾನ್ಯ ಸಭಾಪತಿಯವರೆ, ಉಪ ಪ್ರಶ್ನೆಯನ್ನು ಕೇಳುವಾಗ ನೀವು ಅಷ್ಟೊಂದು ಉದ್ದವಾಗಿ ಕೇಳಬಾರದು. ಬಹಳ ಚಿಕ್ಕದಾಗಿರಬೇಕು. ನಿಮ್ಮ ಪ್ರಶ್ನೆಯಾದರೂ ಇಷ್ಟೆ. ನಮ್ಮ ಜಿಲ್ಲೆಯಿಂದ ಇಷ್ಟು ಹಣವನ್ನು ತೆರಿಗೆ ರೂಪದಲ್ಲಿ ಕೊಟ್ಟಿದ್ದೇವೆ, ಆದರೆ ಅದನ್ನು ನಮ್ಮ ಜಿಲ್ಲೆಗೆ ಖರ್ಚು ಮಾಡಿಲ್ಲ ಎಂಬುದು. ಅದಕ್ಕೆ ಉತ್ತರವನ್ನು ಕೊಟ್ಟಿದ್ದಾರೆ. ಎಲ್ಲ ತೆರಿಗೆಯೂ ರಾಜ್ಯ ಸರ್ಕಾರಕ್ಕೆ ಬರುತ್ತದೆ. ಅದನ್ನು ಖರ್ಚು ಮಾಡುವಾಗ ರಾಜ್ಯದ ಎಲ್ಲ ಭಾಗಗಳಿಗೂ ಸಮನಾಗಿ ಖರ್ಚುಮಾಡುತ್ತೇವೆ ಎಂದು.

ಶ್ರೀ ಯು.ಆರ್.ಸಭಾಪತಿ:- ನಮ್ಮ ಜಿಲ್ಲೆಯ ಸಾರಿಗೆ ವ್ಯವಸ್ಥೆಯ ಸುಧಾರಣೆಗೆ ಯಾವ ವ್ಯವಸ್ಥೆ ಮಾಡಲಾಗಿದೆ ಎಂಬ ಪ್ರಶ್ನೆಯನ್ನು ನಾನು ಕೇಳಿದ್ದೆ.

ಅಧ್ಯಕ್ಷರು:- ರಾಜ್ಯದ ಎಲ್ಲಾ ಜಿಲ್ಲೆಗಳಿಂದ ಬರತಕ್ಕ ಹಣವನ್ನೂ ಒಟ್ಟುಗೂಡಿಸಿ ರಾಜ್ಯದ ಎಲ್ಲ ಇಲಾಖೆಗಳಿಗೂ ಖರ್ಚುಮಾಡಲಾಗುತ್ತದೆ. ತೆರಿಗೆಯನ್ನು ವಸೂಲ್ಮಾಡುವುದಕ್ಕೆ ಕೆಲವು ಇಲಾಖೆಗಳಿವೆ. ಆದ್ದರಿಂದ ನಮ್ಮ ಜಿಲ್ಲೆಗೆ ಹೆಚ್ಚು ಗಮನ ಕೊಡಿ ಎಂದು ಹೇಳಿ. ನಾನು ತಮಗೆ ಸಹಾಯ ಮಾಡುತ್ತಿದ್ದೇನೆ.

ಶ್ರೀ ಪಿ.ಜಿ.ಆರ್.ಸಿಂಧ್ಯ:- ಮಾನ್ಯ ಅಧ್ಯಕ್ಷರೆ, ತಾವೇ ಉತ್ತರವನ್ನು ಕೊಟ್ಟಿದ್ದೀರಿ. ನಾವು ತೆರಿಗೆಯನ್ನು ಏನು ವಸೂಲ್ಮಾಡುತ್ತೇವೆ. ಆದು ಒಂದು ಜಿಲ್ಲೆಗೆ ಅಥವಾ ಒಂದು ಬಾಬಿಗೆ ಎಂದು ಏನೂ ಖರ್ಚುಮಾಡುವುದಕ್ಕಾಗುವುದಿಲ್ಲ. ಮೋಟಾರ್ ವೆಹಿಕಲ್ಸ್ ಟ್ಯಾಕ್ಸ್‌ನ್ನು ಕಲೆಕ್ಟ್ ಮಾಡುವುದು it cannot be only for a particular District or Taluk. The whole money is pooled for the Treasury.

ನೀವು ಹೇಳುತ್ತಿರುವುದು ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಸಾರಿಗೆ ವ್ಯವಸ್ಥೆಯನ್ನು, ಸಂಪನ್ಮೂಲಗಳನ್ನು ಅಭಿವೃದ್ಧಿ ಮಾಡುವುದಕ್ಕೆ ಹಣವನ್ನು ಖರ್ಚು ಮಾಡಿ ಎಂದು ಹೇಳಿದ್ದೀರಿ. I will try to give some preference when we take up the KSRTC work.

ಅಧ್ಯಕ್ಷರು:- ಖರ್ಗೆಯವರೆ ತಾವು ತಮ್ಮ ಸ್ಥಾನಕ್ಕೆ ಹೋಗಿ ತಮ್ಮ ಪ್ರಶ್ನೆಯನ್ನು ಕೇಳುತ್ತೀರಾ?

ಶ್ರೀಎಂ.ಮಲ್ಲಿಕಾರ್ಜುನ ಖರ್ಗೆ:- ತಾವೇ ಕೇಳಿ.

ಅಧ್ಯಕ್ಷರು:- ರಮಾನಾಥ ರೈರವರೇ ತಾವು ಏನು ಮಾಡುತ್ತೀರಿ? ಹಾಗಾದರೆ.

It will not reflect well on the proceedings of the House. Shall, I skip over this question ? I can't put that question, because you are in the Houses. How can I do that?

(HON'BLE MEMBER SRI.KHARGE SPOKE FROM WELL OF THE HOUSE.)

ವಿಷಯ: ಭೂಸಾರ ಸಂರಕ್ಷಣಾಯೋಜನೆಗೆ ವೆಚ್ಚವಾದ ಹಣ.

1. ಚುಕ್ಕೆ ಗುರುತಿನ ಪ್ರಶ್ನೆ ಸಂಖ್ಯೆ : 4(119)

ಶ್ರೀ ಹೆಚ್.ಶಿವಪ್ಪ(ಹರಿಹರ) :- ಮಾನ್ಯ ಕೃಷಿ ಸಚಿವರು, ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ,

ಭೂಸಾರ ಸಂರಕ್ಷಣಾ ಯೋಜನೆಗಳಿಗೆ 1995-96ನೇ ಸಾಲಿನಲ್ಲಿ ವೆಚ್ಚ ಮಾಡಲಾದ ಒಟ್ಟು ಹಣವೆಷ್ಟು?

ಶ್ರೀ ಸಿ.ಬೈರೇಗೌಡ (ಕೃಷಿ ಸಚಿವರು):- 1995-96ನೇ ಸಾಲಿನಲ್ಲಿ ಭೂಸಾರ ಸಂರಕ್ಷಣಾ ಯೋಜನೆಗಳಿಗಾಗಿ ರೂ. 5507- 14 ಲಕ್ಷಗಳನ್ನು ವೆಚ್ಚಮಾಡಲಾಗಿರುತ್ತದೆ.

10.40 ಎ.ಎಂ.

ಶ್ರೀ ಹೆಚ್.ಶಿವಪ್ಪ:- ನನ್ನ ಪ್ರಶ್ನೆಗೆ ಉತ್ತರವಾಗಿ 55 ಕೋಟಿ ರೂಪಾಯಿಗಳನ್ನು ವೆಚ್ಚ ಮಾಡಿದ್ದೇವೆಂದು ಹೇಳಿದ್ದಾರೆ. ಭೂಸಂರಕ್ಷಣಾ ಕೆಲಸಕ್ಕೆ ಜಿಲ್ಲಾವಾರು ಎಷ್ಟೆಷ್ಟು ಖರ್ಚು ಮಾಡಿದ್ದಾರೆಂದು ಹೇಳುವುದಕ್ಕಾಗುತ್ತದೆಯೆ?

ಶ್ರೀ ಸಿ.ಬೈರೇಗೌಡ:- ಅದರ ವಿವರ ನನ್ನ ಹತ್ತಿರ ಇದೆ. ಅದನ್ನು ಮಾನ್ಯ ಸದಸ್ಯರಿಗೆ ಕಳುಹಿಸಿಕೊಡುತ್ತೇನೆ. ಏಕೆಂದರೆ ಅದನ್ನು ಇಲ್ಲಿ ಓದಬೇಕೆಂದರೆ ಬಹಳಷ್ಟು ಹೊತ್ತು ಆಗುತ್ತದೆ.

ಅಧ್ಯಕ್ಷರು:- ಓದುವುದು ಬೇಡ, ಸದಸ್ಯರಿಗೆ ಮಾಹಿತಿಯನ್ನು ಕಳುಹಿಸಿಕೊಡಿ.

ಶ್ರೀ ಹೆಚ್.ಶಿವಪ್ಪ:- ಇಷ್ಟು ಹಣ ಖರ್ಚು ಮಾಡಿದ್ದೀರಲ್ಲ ಅಷ್ಟು ಪ್ರತಿಫಲ ದೊರಕಿದೆಯೇ?

ಶ್ರೀ ಸಿ.ಬೈರೇಗೌಡ:- ದೂರುಗಳು ಬಂದಿರುವುದು ನಿಜ. ನಾನು ರಾಜ್ಯದ ಎಲ್ಲಾ ಜಿಲ್ಲೆಗಳಿಗೆ ಹೋಗಿ ನೋಡಿದ್ದೇನೆ. ಕೆಲಸ ಸಮರ್ಪಕವಾಗಿ ಆಗಿರಲಿಲ್ಲ. ಅಂಥ ಬಹಳಷ್ಟು ಜನರ ಮೇಲೆ ಕ್ರಮ ತೆಗೆದುಕೊಂಡಿದೆ. ಒಂದೇ ರೀತಿ ಕ್ರಮ ತೆಗೆದುಕೊಂಡಿರತಕ್ಕದ್ದು ಅಲ್ಲ. ಸಿವಿಲ್ ಮತ್ತು ಕ್ರಿಮಿನಲ್ ಕ್ರಮ ತೆಗೆದುಕೊಂಡಿದ್ದೇವೆ. ಕೆಲವರ ಮೇಲೆ ಪೊಲೀಸ್ ಕಂಪ್ಲೆಂಟ್ ಕೊಟ್ಟು ಪೋಲಿಸ್ ಮೊಕದ್ದಮೆ ರಿಜಿಸ್ಟರ್ ಮಾಡಿ ಇನ್‌ವೆಸ್ಟಿಗೇಷನ್ ಕ್ರಮ ಜರುಗುತ್ತಿದೆ.

ಅಧ್ಯಕ್ಷರು:- ಮಾನ್ಯ ಮುದ್ದು ಹನುಮೇಗೌಡರಿಗೆ ಅಪಘಾತವಾಗಿದೆ. ಅವರ ಪ್ರಶ್ನೆಗೆ 85 ಕ್ಕೆ ಸಮಯ ಕೇಳಿದ್ದಾರೆ. ಆದ್ದರಿಂದ ಅದನ್ನು ತಡೆಹಿಡಿಯಲಾಗಿದೆ.

ಅಧ್ಯಕ್ಷರು:- ಇಲ್ಲ, ಇಲ್ಲ ಹಾಗೆ ಅವಕಾಶ ಕೊಡುವುದಿಲ್ಲ. ಅವರು ಸದನಕ್ಕೆ